# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 304 (386) |
| ಉತ್ತರಿಸಬೇಕಾದ ದಿನಾಂಕ | 23.09.2020 |
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಒಟ್ಟು ಹಿಡುವಳಿದಾರರ ಸಂಖ್ಯೆ ಎಷ್ಟು; (ದೊಡ್ಡ ಮತ್ತು ಸಣ್ಣ ಹಿಡುವಳಿದಾರರ ಸಂಖ್ಯೆ ಪ್ರತ್ಯೇಕವಾಗಿ ನೀಡುವುದು) | ರಾಜ್ಯದಲ್ಲಿರುವ ಒಟ್ಟು ಹಿಡುವಳಿದಾರರ ಸಂಖ್ಯೆ **99,02,651**<br><br>**ದೊಡ್ಡ ಹಿಡುವಳಿದಾರರು:25,48,997**<br><br>**ಸಣ್ಣ ಹಿಡುವಳಿದಾರರು:73,53,654** |
| ಆ | ಇದುವರೆಗೆ 11-ಇ ಸ್ಕೆಚ್‌ಗೆ ಬಂದಿರುವ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು; 11-ಇ ಸ್ಕೆಚ್ ವಿಲೇವಾರಿ ಮಾಡುವಲ್ಲಿ ಅನುಸರಿಸಲಾಗುವ ಮಾರ್ಗಸೂಚಿಗಳೇನು; (ವಿವರ ನೀಡುವುದು) | ರಾಜ್ಯದಲ್ಲಿ 11-ಇ ನಕ್ಷೆ ಕೋರಿ ಒಟ್ಟು 3,37,410 ಅರ್ಜಿಗಳು ಸ್ವೀಕೃತವಾಗಿರುತ್ತವೆ. **11-ಇ ಸ್ಕೆಚ್ ವಿಲೆವಾರಿ ಮಾಡುವಲ್ಲಿ ಅನುಸರಿಸಲಾಗುವ ಮಾರ್ಗಸೂಚಿಗಳು.**<br><br>1) 11-ಇ ನಕ್ಷೆ ಕೋರಿರುವ ಜಮೀನಿನ ಪಹಣಿಯ ಕಾಲಂ 3 ಮತ್ತು ಕಾಲಂ 9ರಲ್ಲಿ ನಮೂದಿಸಿರುವ ವಿಸ್ತೀರ್ಣ ಒಂದಕ್ಕೊಂದು ತಾಳೆಯಾಗಿರಬೇಕು.<br>2) 11-ಇ ನಕ್ಷೆ ಕೋರಿರುವ ಜಮೀನನ ಪಹಣಿಯಲ್ಲಿ ದಾಖಲಾಗಿರುವ ವಿಸ್ತೀರ್ಣವು, ಆಕಾರ್‌ಬಂದ್‌ನಲ್ಲಿ ದಾಖಲಾಗಿರುವ ವಿಸ್ತೀರ್ಣಕ್ಕೆ ತಾಳೆಯಾಗಬೇಕು.<br>3) ಸರ್ವೆ ನಂಬರಿನ ಪಹಣಿಯಲ್ಲಿ ದಾಖಲಾಗಿರುವ ಖರಾಬು ವಿಸ್ತೀರ್ಣವು ಆಕಾರ್‌ಬಂದ್‌ನಲ್ಲಿ ದಾಖಲಾಗಿರುವ ವಿಸ್ತೀರ್ಣಕ್ಕೆ ತಾಳೆಯಾಗಿರಬೇಕು.<br>4) ಸಂಬಂಧಿಸಿದ ಜಮೀನಿನ ಸರ್ವೆ ದಾಖಲೆಗಳು ಲಭ್ಯವಿರಬೇಕು ನಂತರ ಸದರಿ ಅರ್ಜಿಯನ್ನು ಅಳತೆ ಕುರಿತು ಆನ್‌ಲೈನ್‌ನಲ್ಲಿ ಮೋಜಿಣಿ ತಂತ್ರಾಂಶದ ಮುಂಖಾತರ ಪರವಾನಗಿ ಭೂಮಾಪಕರಿಗೆ ಅಳತೆಗಾಗಿ ಹಂಚಿಕೆ ಮಾಡಲಾಗುವುದು.<br>5) ಪರವಾನಗಿ ಭೂಮಾಪಕರು ಸಂಬಂಧಿಸಿದ ಹಕ್ಕುದಾರರಿಗೆ ಮುಂಚಿತವಾಗಿ ನೋಟೀಸ್ ನೀಡಿ ಸಂಬಂಧಿಸಿದ ಹಕ್ಕುದಾರರ ಸಮಕ್ಷಮ ಅಳತೆ ಹೇಳಿಕೆ ಪಡೆದು ಅರ್ಜಿದಾರರ ಕೋರಿಕೆಯಂತೆ 11-ಇ ನಕ್ಷೆ ಮತ್ತು ಇತರೆ ದಾಖಲೆಗಳನ್ನು ತಯಾರಿಸಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ ನಂತರ ಕಡತವನ್ನು ಕಛೇರಿಗೆ ಹಿಂದಿರುಗಿಸುತ್ತಾರೆ. |

| | | |
|---|---|---|
| | | ನಂತರ ಸದರಿ ಕಡತದಲ್ಲಿ ನಿಯಮಾನುಸಾರ ಪರಿಶೀಲಿಸಿ 11-ಇ ನಕ್ಷೆಯನ್ನು ಆನ್‌ಲೈನ್‌ನಲ್ಲಿ ಅನುಮೋದಿಸಿ ಸಾರ್ವಜನಿಕರಿಗೆ ಅಟಲ್ ಜೀ ಜನಸ್ನೇಹಿಕೇಂದ್ರದ ಮುಖಾಂತರ ವಿತರಿಸಲಾಗುವುದು. |
| ಇ | 11-ಇ ಸ್ಕೆಚ್ ವಿಲೇವಾರಿ ಮಾಡುವಲ್ಲಿ ವಿಳಂಬ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುತ್ತದೆ. |
| ಈ | ವಿಳಂಬಕ್ಕೆ ಕಾರಣಗಳೇನು; ವಿಳಂಬ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಇಲಾಖೆಯಲ್ಲಿ 11-ಇ ನಕ್ಷೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲಿ ಸ್ವೀಕರಿಸಲಾಗುತ್ತಿದ್ದು, ಅಳತೆಗಾಗಿ ಸಂಬಂಧಿಸಿದ ಪರವಾನಗಿ ಭೂ ಮಾಪಕರಿಗೆ ಆನ್‌ಲೈನ್‌ನಲ್ಲಿ ವಿತರಿಸಲಾಗುತ್ತಿದೆ. ಪ್ರಕರಣದಲ್ಲಿ ಅಳತೆಯಾದ ನಂತರ ಪರವಾನಗಿ ಭೂಮಾಪಕರು ಆನ್‌ಲೈನ್‌ನಲ್ಲಿ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಲಾದ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹ ಆನ್‌ಲೈನ್ ನಲ್ಲಿ ನಿರ್ವಹಿಸಲಾಗುತ್ತಿದೆ.<br>ಮೋಜಿಣಿ ತಂತ್ರಾಂಶದ ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಲ್ಲಿ ಅಳವಡಿಸಲಾಗಿದ್ದು, ಯಾವುದೇ ಹಂತದಲ್ಲಿ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮ ವಹಿಸಲಾಗುತ್ತಿದೆ.<br>ಇವುಗಳಲ್ಲದೆ ಪ್ರಗತಿ ಕುರಿತು ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಸೂಚನೆ ನೀಡಲಾಗುತ್ತಿದೆ.<br>ಹೆಚ್ಚಿನ ಪ್ರಕಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಇರುವ ತಾಲ್ಲೂಕುಗಳಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಬಾಕಿ ಇರುವ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

ಕಂಇ 112 ಎಂಆರ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು